1 2	3	4	5
14. ಭೀಮಾ ಪ್ಲೋ	0.50	–	0.50
15. ಭೀಮಾ ಲಿಫ್ಟ್	0.30	0.03	0.27
16. ಅಮರ್ಜ	3.00	4.17	–
17. ಮುಲ್ಲಾಮಾರಿ ಮೇಲ್ದಂಡೆ	0.15	0.25	–
18. ಮುಲ್ಲಾಮಾರಿ ಕೆಳದಂಡೆ	2.85	3.43	–
19. ಗಂಹೋರಿನಾರಿ	0.40	0.07	0.33
20. ತುಂಗಾ ಮೇಲ್ದಂಡೆ	2.50	0.28	2.22
21. ಭದ್ರಾ	6.00	10.99	–
22. ಭದ್ರಾ ಅಣೆಕಟ್ಟು ನವೀಕರಣ	1.00	0.81	0.19
23. ರಾಣಿ ಕೆರೆ ಪೂರಕ ನಾಲೆ	0.50	0.54	–
24. ಹೋವಿರಾಯನ ಹಳ್ಳ	0.50	–	0.50
25. ರಾಷ್ಟ್ರೀಯ ಜಲನಿರ್ವಹಣೆ ಯೋಜನೆ	9.00	5.81	3.19
26. ಕೃಷ್ಣಾ ಜಲಾನಯನ ಪಿತ ನೀರಾವರಿ ನಿಗಮ	1.00	0.50	0.50
ಒಟ್ಟು	247.40	133.00	128.98

ಐ.ಎ.ಎಸ್ ಮತ್ತು ಐ.ಪಿ.ಎಸ್. ಅಧಿಕಾರಿಗಳು

77(244) ಶ್ರೀ. ವೈ.ಕೆ. ರಾಮಯ್ಯ (ಕುಣಿಗಲ್)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1989ರ ಈಚೆಗೆ ಕರ್ನಾಟಕ ರಾಜ್ಯ ಸರ್ಕಾರದ ಸೇವೆಯಲ್ಲಿರುವ ಯಾವ ಯಾವ ಐ.ಎ.ಎಸ್ ಮತ್ತು ಐ.ಪಿ.ಎಸ್ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಯಿತು ?

ಆ) ಯಾವ ಕಾರಣಕ್ಕಾಗಿ ಈ ಕೆಲವು ಅಧಿಕಾರಿಗಳ ಮೇಲೆ ಕೈಗೊಂಡಿದ್ದ ಶಿಸ್ತಿನ ಕ್ರಮವನ್ನು ಕೈಬಿಡಲಾಯಿತು ಮತ್ತು ಯಾವ ಕಾರಣಕ್ಕಾಗಿ ಕೆಲವು ಅಧಿಕಾರಿಗಳನ್ನು ಶಿಕ್ಷಿಸಲಾಯಿತು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಶ್ರೀಯುತರು:

1. ಎಂ. ಶಂಕರನಾರಾಯಣನ್, ಐಎಎಸ್
2. ಕೌಶಿಕ ಮುಖರ್ಜಿ, ಐಎಎಸ್
3. ಆರ್.ಕೆ. ಭಾಟಿಯಾ, ಐಎಎಸ್
4. ಡಿ. ತಂಗರಾಜ್, ಐಎಎಸ್
5. ಎಂ. ಮದನಗೋಪಾಲ್, ಐಎಎಸ್
6. ರಿಚರ್ಡ್ ಕ್ರಾಸ್ಟಾ, ಐಎಎಸ್
7. ಪಿ.ಜಿ. ನಾಯ್ಕ, ಐಎಎಸ್
8. ಬಿ.ಕೆ.ಡಿ. ನೇಗಿ, ಐಎಎಸ್
9. ಕೆ.ಎಸ್.ಎನ್.ಚಿಕ್ಕೆರೂರು, ಐಪಿಎಸ್

10. ಸುಭಾಷ್ ಚಂದ್ರ, ಐಪಿಎಸ್
11. ಬಿ.ಇ. ಉಮಾಪತಿ, ಐಪಿಎಸ್

ಆ) ಶ್ರೀ. ಎಂ. ಶಂಕರನಾರಾಯಣನ್, ಐಎಎಸ್ ಮತ್ತು ಶ್ರೀ. ಎಂ. ಮದನಗೋಪಾಲ್, ಐಎಎಸ್. ಇವರ ಪ್ರಕರಣಗಳನ್ನು ಸರ್ಕಾರ ಪುನರ್ ಪರಿಶೀಲನೆ ಮಾಡಿ ಶಿಸ್ತಿನ ಕ್ರಮವನ್ನು ಮುಂದುವರಿಸುವ ಅಗತ್ಯವಿಲ್ಲವೆಂದು ನಿರ್ಧಾರ ಕೈಗೊಂಡಿದೆ.

ಶ್ರೀ. ರಿಚರ್ಡ್ ಕ್ರಾಸ್ಟಾ, ಐಎಎಸ್. ಇವರ ಪ್ರಕರಣದಲ್ಲಿ ಇವರು ಗೈರು ಹಾಜರಾದ ಬಗ್ಗೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲಾಯಿತು. ಅವರು ರಾಜೀನಾಮೆ ನೀಡಿದ್ದರಿಂದ ಮುಂದಿನ ಕ್ರಮವನ್ನು ತೆಗೆದುಕೊಂಡಿಲ್ಲ.

ಶ್ರೀ. ತಂಗರಾಜ್, ಐಎಎಸ್‌ರವರು ಕರ್ನಾಟಕ ಭೂಮಂಜೂರಾತಿ ನಿಯಮಗಳನ್ನು ಉಲ್ಲಂಘಿಸಿ ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ಇವರಿಗೆ ಜಮೀನು ಮಂಜೂರು ಮಾಡಿದ್ದರಿಂದ ಅವರಿಗೆ ಎಚ್ಚರಿಕೆ ನೀಡಲಾಗಿದ್ದು ಮತ್ತು ಶ್ರೀ. ಕೆ.ಎಸ್.ಎನ್. ಚಿಕ್ಕೆರೂರು, ಐಪಿಎಸ್, ಇವರು ಲೋಕಾಯುಕ್ತ ಕಛೇರಿಯಿಂದ ವರ್ಗಾವಣೆಯಾದಾಗ ಕಡತಗಳನ್ನು ಹಿಂದಿರುಗಿಸದಿದ್ದ ಕಾರಣ, ಇವರ ಸಾಬೀತಾದ ಆರೋಪಗಳ ಮೇರೆಗೆ ಒಂದು ವೇತನ ಬಡ್ತಿಯನ್ನು ತಡೆ ಹಿಡಿದು ಶಿಕ್ಷಿಸಲಾಯಿತು.

ಶ್ರೀ. ಪಿ.ಜಿ. ನಾಯ್ಕ, ಐಎಎಸ್, ಶ್ರೀ.ಬಿ.ಕೆ.ಡಿ. ನೇಗಿ, ಐಎಎಸ್, ಶ್ರೀ. ಭಾಟಿಯಾ, ಐಎಎಸ್, ಶ್ರೀ. ಸುಭಾಷ ಚಂದ್ರ, ಐಪಿಎಸ್, ಮತ್ತು ಶ್ರೀ. ಬಿ.ಇ. ಉಮಾಪತಿ, ಐಪಿಎಸ್, ಇವರ ಪ್ರಕರಣಗಳು ಬೇರೆ ಬೇರೆ ಹಂತಗಳಲ್ಲಿವೆ. ಮತ್ತು ಅಂತಿಮ ನಿರ್ಧಾರವನ್ನು ತೆಗೆದುಕೊಂಡಿಲ್ಲ. ಶ್ರೀ. ಕೌಶಿಕ್ ಮುಖರ್ಜಿ, ಐಎಎಸ್, ಇವರ ಪ್ರಕರಣವು ಭಾರತ ಸರ್ಕಾರದಲ್ಲಿ ಬಾಕಿ ಇರುತ್ತದೆ.

ರೇಷ್ಮೆ ಹುಳುಗಳಿಗೆ ಗಂಟು ರೋಗ.

79 (248) ಶ್ರೀ. ವೈ.ಕೆ. ರಾಮಯ್ಯ (ಕುಣಿಗಲ್)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿ ರೇಷ್ಮೆ ಹುಳುಗಳಿಗೆ ವ್ಯಾಪಕವಾಗಿ "ಗಂಟುರೋಗ" ಬಂದು ಇದರಿಂದ ರಾಜ್ಯದ ಅತಿ ದೊಡ್ಡ ಉದ್ಯಮದ ಪ್ರಗತಿ ಕುಂಠಿತವಾಗಿರುವುದು ಹಾಗೂ ರಾಜ್ಯದಲ್ಲಿ ರೇಷ್ಮೆ ಗೂಡಿನ ಉತ್ಪತ್ತಿ ಕಡಿಮೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ರೇಷ್ಮೆ ಗೂಡಿನ ಉತ್ಪತ್ತಿ ಎಷ್ಟು ಕಡಿಮೆಯಾಗಿದೆ;

ಇ) ಈ ರೋಗ ವ್ಯಾಪಕವಾಗಿ ಹರಡದಂತೆ ನಿಯಂತ್ರಣ ಮಾಡುವಲ್ಲಿ ಇಲಾಖೆ ವಿಫಲವಾಗಲು ಕಾರಣವೇನು;

ಈ) ಈ ರೋಗವನ್ನು ನಿಯಂತ್ರಣ ಮಾಡಿ ರೈತರಿಗೆ ರೋಗರಹಿತ ರೇಷ್ಮೆ ಮೊಟ್ಟೆ ಒದಗಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು)

ಅ) 1992–93ನೇ ಸಾಲಿನಲ್ಲಿ ರೇಷ್ಮೆ ಗೂಡಿನ ಉತ್ಪಾದನೆ ಕುಂಠಿತವಾಗಿಲ್ಲ. ಅದು ಕಳೆದ ಎರಡು ವರ್ಷಗಳ ಇದೇ ಅವಧಿಯಲ್ಲಿನ ಉತ್ಪಾದನೆಗಿಂತ ಏರಿಕೆಯಾಗಿದೆ.

ಆ) ಉದ್ಭವಿಸುವುದಿಲ್ಲ.